# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 610
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 19-09-2022
ಉತ್ತರಿಸುವ ಸಚಿವರು : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಬೆಂಗಳೂರಿನಲ್ಲಿ ಎಷ್ಟು ರಂಗಮಂದಿರ, ಸಭಾಂಗಣ, ಹೊರಾಂಗಣ ಸಭಾಂಗಣಗಳಿವೆ; (ವಿವರ ನೀಡುವುದು) | ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯ ಬೆಂಗಳೂರಿನಲ್ಲಿ ಒಟ್ಟು 05 ಸರ್ಕಾರಿ ರಂಗಮಂದಿರಗಳಿವೆ.<br>1. ರವೀಂದ್ರ ಕಲಾಕ್ಷೇತ್ರ.<br>2. ನಯನ ಸಭಾಂಗಣ.<br>3. ಸಂಸ ಬಯಲು ರಂಗಮಂದಿರ.<br>4. ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಛಯ.<br>5. ಕಲಾಗ್ರಾಮದ ಬಯಲು ರಂಗಮಂದಿರ. |
| ಆ | ಈ ಸಭಾಂಗಣಗಳಿಗೆ ಹಿಂದೆ ವಿಧಿಸುತ್ತಿದ್ದ ಬಾಡಿಗೆ ಎಷ್ಟು; ಹಾಲಿ ಸರ್ಕಾರವು ವಿಧಿಸುತ್ತಿರುವ ಬಾಡಿಗೆ ಅಥವಾ ಹೆಚ್ಚುವರಿ ಮಾಡಲು ಯೋಜಿಸಿರುವ ಬಾಡಿಗೆ ಎಷ್ಟು; (ವಿವರ ನೀಡುವುದು) | ಅನುಬಂಧ -1 ಮತ್ತು ಅನುಬಂಧ -2 ರಲ್ಲಿ ಇರಿಸಿದೆ. |
| ಇ | ಕಲಾವಿದರಿಗೆ ಸಾಂಸ್ಕೃತಿಕ ಚಟುವಟಿಕೆ ನಡೆಸಲು ಈ ಸಭಾಂಗಣದ ಬಾಡಿಗೆ ಹೆಚ್ಚಳದಿಂದ ಕಲಾವಿದರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಾಡಿಗೆ ಹೆಚ್ಚಳದ ನಂತರ ರಂಗಮಂದಿರ ಚಟುವಟಿಕೆ ಮತ್ತು ಕಾಯ್ದಿರಿಸುವಿಕೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. |
| ಈ | ಈ ರಂಗಮಂದಿರಗಳು ಹೆಚ್ಚುವರಿ ಮಾಡಲಾಗಿರುವ ಬಾಡಿಗೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬಾಡಿಗೆ ಹೆಚ್ಚಳದಿಂದಾಗಿ ರಂಗಮಂದಿರ ಚಟುವಟಿಕೆಗಳಲ್ಲಿ ಮತ್ತು ಕಾಯ್ದಿರಿಸುವಿಕೆಯಲ್ಲಿ ಯಾವುದೇ ಪರಿಣಾಮ ಇರುವುದಿಲ್ಲ ಅನುಬಂಧ-3ರಲ್ಲಿ ವಿವರಗಳನ್ನು ನೀಡಲಾಗಿದೆ. ಹೀಗಾಗಿ ಬಾಡಿಗೆ ಕಡಿಮೆ ಮಾಡುವ ಪ್ರಮೇಯವಿರುವುದಿಲ್ಲ. |

ಸಂಖ್ಯೆ: ಕಸಂವಾ 72 ಕವಿಸ 2022

**(ವಿ. ಸುನಿಲ್ ಕುಮಾರ್)**
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

L-666

5

# ಅನುಬಂಧ - 1

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ ರಂಗಮಂದಿರಗಳ ಹಳೆಬಾಡಿಗೆ

| ಕ್ರ.ಸಂ | ರಂಗಮಂದಿರಗಳ ಹೆಸರು ಮತ್ತು ಆಸನಗಳ ಸಂಖ್ಯೆ | ವಿವರ | ಬಾಡಿಗೆ | ಜಿ.ಎಸ್.ಟಿ | ಠೇವಣಿ | ಒಟ್ಟು | ಎರಡು ಪಾಳಿಗೆ ಒಂದು ದಿನಕ್ಕೆ ಒಟ್ಟು |
|---|---|---|---|---|---|---|---|
| 01 | ರವೀಂದ್ರ ಕಲಾಕ್ಷೇತ್ರ 830 ಆಸನಗಳು | ನಾಟಕ | 2000 | 360 | 3000 | 5360 | 10720 |
| | | ಸಾಂಸ್ಕೃತಿಕ ಕಾರ್ಯಕ್ರಮ | 3000 | 540 | 3000 | 6540 | 13080 |
| 02 | ನಯನ ಸಭಾಂಗಣ 146 ಆಸನಗಳು | ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ | 2000 | 360 | 1000 | 3360 | 6720 |
| 03 | ಸಂಸ ಬಯಲು ರಂಗಮಂದಿರ | | 500 | 90 | 500 | 1090 | 2180 |
| 04 | ಆರ್ಟ್ ಗ್ಯಾಲರಿ | | 100 | 18 | 600 | 718 | 1436 |
| 05 | ಮಹಿಳಾ ವಿಶ್ರಾಂತಿ ಕೊಠಡಿ | | 300 | 54 | 0 | 354 | 708 |
| 06 | ಕಲಾಗ್ರಾಮ ಸಾಂಸ್ಕೃತಿ ಕಸಮುಚ್ಚಯ 292 ಆಸನಗಳು | ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ | 2000 | 360 | 1000 | 3360 | 6720 |
| 07 | ಕಲಾಗ್ರಾಮ ಬಯಲು ರಂಗಮಂದಿರ | | 500 | 90 | 500 | 1090 | 2180 |

ಜಂಟಿ ನಿರ್ದೇಶಕರು (ಕೇಂದ್ರ ಕಛೇರಿ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

# ಅನುಬಂಧ - 2

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ ರಂಗಮಂದಿರಗಳ ಹೊಸ ಬಾಡಿಗೆ ದರ ಪಟ್ಟಿ

| ಕ್ರ.ಸಂ | ರಂಗಮಂದಿರಗಳ ಹೆಸರು ಮತ್ತು ಆಸನಗಳ ಸಂಖ್ಯೆ | ವಿವರ | ಬಾಡಿಗೆ | ಜಿ.ಎಸ್.ಟಿ | ಠೇವಣಿ | ಒಟ್ಟು | ಎರಡು ಪಾಳಿಗೆ ಒಂದು ದಿನಕ್ಕೆ ಒಟ್ಟು |
|---|---|---|---|---|---|---|---|
| 01 | ರವೀಂದ್ರ ಕಲಾಕ್ಷೇತ್ರ 830 ಆಸನಗಳು | ನಾಟಕ | 5000 | 900 | 5000 | 10900 | 21800 |
| | | ಸಾಂಸ್ಕೃತಿಕ ಕಾರ್ಯಕ್ರಮ | 6000 | 1080 | 5000 | 12080 | 24160 |
| 02 | ನಯನಸಭಾಂಗಣ 146 ಆಸನಗಳು | ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರ.ಮ | 3000 | 540 | 3000 | 6540 | 13080 |
| 03 | ಸಂಸ ಬಯಲು ರಂಗಮಂದಿರ | | 1000 | 180 | 1000 | 2180 | 4360 |
| 04 | ಆರ್ಟ್ ಗ್ಯಾಲರಿ | | 500 | 90 | 500 | 1090 | 2180 |
| 05 | ಮಹಿಳಾ ವಿಶ್ರಾಂತಿ ಕೊಠಡಿ | | 500 | 90 | 0 | 590 | 1180 |
| 06 | ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ 292 ಆಸನಗಳು | ನಾಟಕ | 3000 | 540 | 3000 | 6540 | 13080 |
| | | ಸಾಂಸ್ಕೃತಿಕ ಕಾರ್ಯಕ್ರಮ | 4000 | 720 | 4000 | 8720 | 17440 |
| 07 | ಕಲಾಗ್ರಾಮ ಬಯಲು ರಂಗಮಂದಿರ | | 1000 | 180 | 1000 | 2180 | 4360 |

ಜಂಟಿ ನಿರ್ದೇಶಕರು (ಕೇಂದ್ರ ಕಛೇರಿ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

<u>**ಕರ್ನಾಟಕ ಸರ್ಕಾರದ ನಡವಳಿಗಳು**</u>

**ವಿಷಯ:** ರವೀಂದ್ರ ಕಲಾಕ್ಷೇತ್ರ ಹಾಗೂ ನಯನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಪರಿಷ್ಕೃತ ಬಾಡಿಗೆ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:** 1. ದಿನಾಂಕ:20-08-2015 ಸಂಖ್ಯೆ ಕಸಂವಾ 404 ಕಸಧ 2015ರ ಸರ್ಕಾರಿ ಆದೇಶ.
2. ದಿನಾಂಕ: 06-07-2015ರ ಸಂಖ್ಯೆ: ಡಿಕೆಸಿ/25/7/2015ರ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ

<u>**ಪ್ರಸ್ತಾವನೆ:**</u>

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದಲ್ಲಿ ರಾಜ್ಯದ ಜಿಲ್ಲಾರಂಗಮಂದಿರಗಳಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೆ ಪ್ರತಿ ಪಾಳಿಗೆ ರೂ.2,000/- ಗಳ ಬಾಡಿಗೆ ಹಾಗೂ ಟಿಕೇಟ್ ನೀಡಿ ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರತಿ ಪಾಳಿಗೆ ರೂ.3,000/-- ಗಳ ಬಾಡಿಗೆಯನ್ನು ನಿಗದಿಪಡಿಸಿ ಆದೇಶಿಸಿದೆ.

2) ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರು ರವೀಂದ್ರ ಕಲಾಕ್ಷೇತ್ರ ಹಾಗೂ ನಯನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಈಗಾಗಲೇ ನಿಗದಿಪಡಿಸಿರುವ ಬಾಡಿಗೆಯ ಬದಲಿಗೆ ಪ್ರತಿ ಪಾಳಿಗೆ ಸಾಹಿತ್ಯಿಕ ಕಾರ್ಯಕ್ರಮಗಳು, ಪುಸ್ತಕ ಬಿಡುಗಡೆ ಹಾಗೂ ವಿಚಾರ ಸಂಕೀರ್ಣ, ಹವ್ಯಾಸಿ ನಾಟಕ ತಂಡಗಳ ನಾಟಕ ಪ್ರದರ್ಶನ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.2,000/- ಗಳು ಹಾಗೂ ಯಕ್ಷಗಾನ, ಸರ್ಕಾರ ಗುರುತಿಸಿರುವ ಅನುದಾನ ಪಡೆಯುತ್ತಿರುವ ವೃತ್ತಿ ನಾಟಕ ಕಂಪನಿಗಳು, ಟಿಕೇಟ್ ನೀಡಿ ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರತೀ ಪಾಳಿಗೆ ರೂ.3,000/- ಗಳಿಗೆ ನಿಗದಿಪಡಿಸಲು ದಿನಾಂಕ: 08-06--2015 ರಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೀರ್ಮಾನಿಸಿರುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3) ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 404 ಕಸಧ 2015, ಬೆಂಗಳೂರು, ದಿನಾಂಕ: 05-09-2015**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರವೀಂದ್ರ ಕಲಾಕ್ಷೇತ್ರ ಹಾಗೂ ನಯನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಈಗಾಗಲೇ ನಿಗದಿಪಡಿಸಿರುವ ಬಾಡಿಗೆಯ ಬದಲಿಗೆ ಪ್ರತಿ ಪಾಳಿಗೆ ಸಾಹಿತ್ಯಿಕ ಕಾರ್ಯಕ್ರಮಗಳು, ಪುಸ್ತಕ ಬಿಡುಗಡೆ ಹಾಗೂ ವಿಚಾರ ಸಂಕೀರ್ಣ, ಹವ್ಯಾಸಿ ನಾಟಕ ತಂಡಗಳ ನಾಟಕ ಪ್ರದರ್ಶನ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.2,000/- ಗಳು ಹಾಗೂ ಯಕ್ಷಗಾನ, ಸರ್ಕಾರ ಗುರುತಿಸಿರುವ ಅನುದಾನ ಪಡೆಯುತ್ತಿರುವ ವೃತ್ತಿ ನಾಟಕ ಕಂಪನಿಗಳು, ಟಿಕೇಟ್ ನೀಡಿ ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರತೀ ಪಾಳಿಗೆ ರೂ.3,000/- ಗಳಿಗೆ ನಿಗದಿಪಡಿಸಿ ಆದೇಶಿಸಿದೆ.

2) ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/2/ಟಿಎಫ್‌ಪಿ/2015, ದಿನಾಂಕ:09-04-2015 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ, ಮತ್ತು ವಾರ್ತಾ ಇಲಾಖೆ

ಗೆ:

1. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜೆ.ಸಿ.ರಸ್ತೆ, ಬೆಂಗಳೂರು.
3. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ನಗರ. (ನಿರ್ದೇಶಕರ ಮುಖಾಂತರ).
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ/ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ -3

| ಕ್ರ.ಸಂ | ತಿಂಗಳು | ಕಾಯ್ದಿರಿಸಿದ ದಿನಗಳು |
|---|---|---|
| 01 | ಫೆಬ್ರುವರಿ-2022 | 19 ದಿನಗಳು |
| 02 | ಮಾರ್ಚ್-2022 | 26 ದಿನಗಳು |

ಬಾಡಿಗೆ ಹೆಚ್ಚಳದ ನಂತರ

| ಕ್ರ.ಸಂ | ತಿಂಗಳು | ಕಾಯ್ದಿರಿಸಿದ ದಿನಗಳು |
|---|---|---|
| 01 | ಏಪ್ರಿಲ್-2022 | 19 ದಿನಗಳು |
| 02 | ಮೇ-2022 | 30 ದಿನಗಳು |
| 03 | ಜೂನ್-2022 | 28 ದಿನಗಳು |